# ಪ್ರಜಾಪ್ರಭುತ್ವ ಉಳಿವಿಗೆ ಚಳವಳಿ ಆಗಲಿ

## ಸಾಹಿತಿ ಬಿಳಿಗೆರೆ ಕೃಷ್ಣಮೂರ್ತಿ ಸಲಹೆ | ಚಿಕ್ಕನಾಯಕನಹಳ್ಳಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನ

ವಿಜಯವಾಣಿ 01/02/2024

■ ವಿಜಯವಾಣಿ ಸುದ್ದಿಜಾಲ ಹುಳಿಯಾರು

ತುಳಿತಕ್ಕೆ ಒಳಗಾದ, ದುಡಿಯುವ ವರ್ಗಗಳನ್ನು ರಕ್ಷಿಸುವಲ್ಲಿ ವಿಫಲವಾದ ಧರ್ಮಗಳು ಹೇಳ ಹೆಸರಿಲ್ಲದಂತಾಗಿವೆ. ಇದಕ್ಕೆ ಪ್ರಪಂಚದಲ್ಲಿ ನಡೆದ, ನಡೆಯುತ್ತಿರುವ ಯುದ್ಧಗಳೇ ಸಾಕ್ಷಿ. ಭಾರತದ ಪ್ರಜಾಪ್ರಭುತ್ವ ಎನ್ನುವ ಮಹಾಧರ್ಮವನ್ನು ಪ್ರೀತಿ, ತತ್ವದ ಮೇಲೆ ಉಳಿಸಿ ಬೆಳೆಸುವ ಚಳವಳಿ ಆಗಬೇಕಿದೆ ಎಂದು ಸಾಹಿತಿ ಬಿಳಿಗೆರೆ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

**» ರೈತ ಪರ ಹೋರಾಟ ಯುವ ಪೀಳಿಗೆಗೆ ಕಟ್ಟಿಕೊಡುವ ಕೆಲಸ ಆಗಲಿ**

ಹುಳಿಯಾರಿನಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನ ಡಾ.ನಟರಾಜ್ ಹುಳಿಯಾರ ಅವರ ಡೈರೆಕ್ಟ್ ಆಕ್ಷನ್ ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದರು.

ಜನರ ಮೇಲೆ ಪ್ರೀತಿಯಿಲ್ಲದ, ಬದ್ಧತೆಯಿಲ್ಲದ, ಪ್ರಜಾಪ್ರಭುತ್ವದ ಬೇರುಗಳನ್ನು ಸಡಿಲಮಾಡುತ್ತಿರುವ ರಾಜಕಾರಣಿಗಳಿಗೆ ಪಾಠ ಕಲಿಸಲು ರೈತ, ದಲಿತ, ಮಹಿಳಾ ಹೋರಾಟಗಳಿಂದ ಸಾಧ್ಯ. ಹಾಗಾಗಿ ರೈತ ಸಾಲಗಾರನಲ್ಲ. ಸರ್ಕಾರವೇ ಬಾಕಿದಾರ ಎಂಬ ಘೋಷಣೆಯನ್ನು ಕೂಗಿ ರೈತರ ಆಲೋಚನೆಯನ್ನು ಬದಲಾಯಿಸಿ ಹೋರಾಟದ ಕಿಚ್ಚು ಹಚ್ಚಿದ ಪ್ರೊ.ನಂಜುಂಡಸ್ವಾಮಿ ಹೋರಾಟಗಾರರಿಗೆ ಸ್ಫೂರ್ತಿಯಾಗಬೇಕು. ಅವರ ರೈತ ಪರ ಕಾಳಜಿ, ಹೋರಾಟವನ್ನು ಯುವ ಪೀಳಿಗೆಗೆ ಕಟ್ಟಿಕೊಡುವ ಕೆಲಸಗಳು ಆಗಬೇಕು ಎಂದರು. ಕಲಾಶ್ರೀ ಡಾ.ಲಕ್ಷ್ಮಣದಾಸ್, ತಾಲೂಕು ಕಸಾಪ ಅಧ್ಯಕ್ಷ ಎಂ.ಎಸ್.ರವಿಕುಮಾರ್, ಗಾಯಕ ಕೆಂಕೆರೆ ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರಗಳು

ಹುಳಿಯಾರಿನಲ್ಲಿ ಆಯೋಜಿಸಿದ್ದ 11ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ.ನಟರಾಜ್ ಹುಳಿಯಾರ ಅವರ ಡೈರೆಕ್ಟ್ ಆಕ್ಷನ್ ನಾಟಕ ಪ್ರದರ್ಶನಗೊಂಡಿತು.

### ಮನರಂಜನೆಗೂ ಕೊರತೆ ಇಲ್ಲ

ಸಮ್ಮೇಳನ ಗೋಷ್ಠಿಗೆ ಸೀಮಿತವಾಗಿರಲಿಲ್ಲ. ಸಮ್ಮೇಳನಕ್ಕೆ ಬಂದವರಿಗೆ ಭರಪೂರ ಮನರಂಜನೆಯ ರಸದೌತಣ ನೀಡಿತು. ಪ್ರತಿ ಗೋಷ್ಠಿಯ ಮಧ್ಯೆಮಧ್ಯೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಹಾಲುಗೋಣದ ಶ್ರೀ ಸಿದ್ಧರಾಮೇಶ್ವರ ಕಿವುಡ ಮತ್ತು ಮೂಗ ಶಾಲೆಯ ಮಕ್ಕಳ ನೃತ್ಯ ವೇದಿಕೆಯಲ್ಲಿದ್ದ ಶಾಸಕರಾದಿಯಾಗಿ ಎಲ್ಲರ ಮೆಚ್ಚುಗೆ ಗಳಿಸಿತ್ತು. ಹುಳಿಯಾರಿನ ವಿವಿಧ ಭಜನಾ ಮಂಡಳಿಯಿಂದ ಭಜನೆ, ಬೆಂಗಳೂರಿನ ನಗ್ನ ಥೇಯಿಟರ್ ಅವರ ಡೈರಕ್ಟ್ ಆಕ್ಷನ್ ನಾಟಕ, ಶೇಷಾದ್ರಿ ಭಜನಾ ಮಂಡಳಿಯಿಂದ ರೈತ ಮಹಿಳೆಯರ ಬದುಕು ರೂಪಕ, ಪ್ರೇಮಾಗೋಪಾಲ್ ಅವರಿಂದ ಶ್ರೀ ಪದ್ಮಾವತಿ ಶ್ರೀನಿವಾಸ ಕಲ್ಯಾಣೋತ್ಸವ. ಜತೆಗೆ ಅನೇಕ ಗಾಯಕರ ಹಾಡುಗಳು, ಏಕಪಾತ್ರಾಭಿನಯ, ಮಿಮಿಕ್ರಿ ಪ್ರದರ್ಶನಗೊಂಡಿತು.

### ದಾಖಲೆ ಸೃಷ್ಟಿಸಿದ ಯುವ ಕವಿಗೋಷ್ಠಿ

ನುಡಿ ಹಬ್ಬ

ಯುವ ಕವಿಗೋಷ್ಠಿ ಎಂದರೆ ಹತ್ತದಿನೈದು ಉದಯೋನ್ಮುಖ ಯುವ ಕವಿಗಳು ತಮ್ಮ ಸ್ವರಚಿತ ಕವನ ವಾಚನ ಮಾಡುವುದು ಸಾಮಾನ್ಯ. ಆದರೆ ಹುಳಿಯಾರಿನ ಸಮ್ಮೇಳನದಲ್ಲಿ ಬರೋಬ್ಬರಿ 50 ಕವಿಗಳು ಪಾಲ್ಗೊಳ್ಳುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಯುವತಿಯರು ಗಟ್ಟಿಯಾದ, ಸಮಾಜವನ್ನು ಎಚ್ಚರಗೊಳಿಸುವ ಕವನ ವಾಚಿಸಿದರೆ ಯುವಕರು ಪ್ರೀತಿ, ಪ್ರೇಮ ಗುಂಗಿನಿಂದ ಹೊರಬಂದಂತೆ ಕಾಣಲಿಲ್ಲ. ಕೆಲವರು ಕನ್ನಡ ನಾಡುನುಡಿಯ ಕವನ ವಾಚಿಸಿ ಅಭಿಮಾನ ಮೆರೆದರು. ಪ್ರೀತಿ ನೋವು, ಬಡತನ, ತಮಾಷೆ, ಸಂಕಟ, ಅಪ್ಪಅಮ್ಮನ ಮಮತೆ ಹೀಗೆ ನವರಸಗಳು ಮೈದಳೆದ ಕವಿತೆಗಳು ಹೊರಹೊಮ್ಮಿದವು. ಸ್ತ್ರೀ ದೌರ್ಜನ್ಯ, ಸ್ವಾತಂತ್ರ್ಯ ಸುಖ ಉಣ್ಣುತ್ತಿರುವ ವರ್ಗ, ಪುರುಷ ಪ್ರಧಾನ ಸಮಾಜ ಹೀಗೆ ತಮ್ಮಲ್ಲಿನ ಚಿಂತನೆ, ದೌರ್ಜನ್ಯ, ಆಕ್ರೋಶವನ್ನು ಕವನದ ಮೂಲಕ ಹೊರಹಾಕಿದರು.



ಕವನ ವಾಚಿಸಿ ಪ್ರಮಾಣ ಪತ್ರ ಪಡೆದ ಯುವ ಕವಯತ್ರಿ.



ಹುಳಿಯಾರು ಸಮ್ಮೇಳನದಲ್ಲಿ ಹಾಲುಗೋಣದ ಶ್ರೀ ಸಿದ್ಧರಾಮೇಶ್ವರ ಕಿವುಡ ಮತ್ತು ಮೂಗ ಶಾಲೆಯ ಮಕ್ಕಳ ನೃತ್ಯ ತಂಡಕ್ಕೆ ಶಾಸಕ ಸಿ.ಬಿ.ಸುರೇಶ್‌ಬಾಬು ಮೆಚ್ಚುಗೆ ವ್ಯಕ್ತಪಡಿಸಿದರು.

### ಸಮ್ಮೇಳನ ಸಮಾರೋಪ

ಹುಳಿಯಾರಿನಲ್ಲಿ 2 ದಿನ ಆಯೋಜಿಸಿದ್ದ ಚಿಕ್ಕನಾಯಕನಹಳ್ಳಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸಿನೊಂದಿಗೆ ಬುಧವಾರ ಸಮಾರೋಪಗೊಂಡಿತು. ಹುಳಿಯಾರು ಪಟ್ಟಣ ಪಂಚಾಯಿತಿ ಡೆನಲ್ಮ್ ಯೋಜನೆಯಲ್ಲಿ ಓಂ ಶಕ್ತಿ ಸ್ವಸಹಾಯ ಸಂಘ, ಶ್ರೀ ದುರ್ಗಾ ಸ್ತ್ರೀ ಶಕ್ತಿ, ಕಾಲ ಭೈರವೇಶ್ವರ, ವೆಂಕಟಾದ್ರಿ, ಕೆಂಚಾಂಬ ಹೀಗೆ ವಿವಿಧ ಸ್ವಸಹಾಯ ಸಂಘದ ಮಹಿಳೆಯರು ಸಿರಿಧಾನ್ಯ, ಸಾವಯವ ಬೆಲ್ಲ, ನಿಪ್ಪಟ್ಟು, ಚಕ್ಕಲಿ, ಹ್ಯಾಂಡ್ ಮೇಡ್ ಸೋಪು, ಗೃಹ ಬಳಕೆ ವಸ್ತುಗಳ ಮಾರಾಟದ ಸ್ಟಾಲ್ ಹಾಕಿ ಸಮ್ಮೇಳನದ ಮೆರುಗು ಹೆಚ್ಚಿಸಿದರು. ಶಾಸಕ ಸಿ.ಬಿ.ಸುರೇಶ್‌ಬಾಬು ಮಳಿಗೆಗಳನ್ನು ಉದ್ಘಾಟಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ, ತಾಲೂಕು ಕಸಾಪ ಅಧ್ಯಕ್ಷ ರವಿಕುಮಾರ್, ಹೋಬಳಿ ಕಸಾಪ ಅಧ್ಯಕ್ಷ ನಾರಾಯಣಪ್ಪ, ಬಿಇಒ ಕಾಂತರಾಜು, ಸ್ವಸಹಾಯ ಸಂಘದ ಲಲಿತಾ, ಭಾಗ್ಯಮ್ಮ, ವಾಣಿ, ಮಂಜುಳಾ, ನಾಗರತ್ನ, ಮಮತ, ಪೂರ್ಣಮ್ಮ, ಸರಸ್ವತಿ, ಶೋಭಾ ಸೇರಿ ಅನೇಕರು ಇದ್ದರು.

# ಸೈಲೆಂಟ್ ಒಲಿಂಪಿಯಾಡ್‌ನಲ್ಲಿ ಸಿದ್ದರಾಮೇಶ್ವರ ವಸತಿ ಶಾಲೆ ಸಾಧನೆ

**ಚಿಕ್ಕನಾಯಕನಹಳ್ಳಿ:** ಸೈಲೆಂಟ್ ಒಲಿಂಪಿಯಾಡ್‌ನಲ್ಲಿ ಶೆಟ್ಟಿಕೆರೆ ಹೋಬಳಿ ಬಿ.ಪಾಳ್ಯದ ಶ್ರೀಸಿದ್ದರಾಮೇಶ್ವರ ಶ್ರವಣ ದೋಷ ಮಕ್ಕಳ ವಸತಿ ಶಾಲೆ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.

ಮುಂಬೈನ ರೌಂಡ್ ಟೇಬಲ್ ಇಂಡಿಯಾ ಸಂಸ್ಥೆ ಫೆ.2, 3ರಂದು ಮುಂಬೈನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಕ್ರೀಡಾಕೂಟದಲ್ಲಿ ಶ್ರವಣ ದೋಷ ವಿದ್ಯಾರ್ಥಿಗಳಾದ ಲಿಖಿತ ಸಿ ಬಾಲಕಿಯರ ವಿಭಾಗದಲ್ಲಿ ಅತ್ಯುತ್ತಮ ನೃತ್ಯಗಾರ್ತಿ, ವೀರಗಾಸೆ ನೃತ್ಯ ಮಾಡಿದ ರಮೇಶ್, ಭದ್ರಕಾಳಿ ನೃತ್ಯ ಮಾಡಿದ ರುಕ್ಕಮ್ಮ ಹಾಗೂ ತಂಡಕ್ಕೆ ಪ್ರಥಮ ಬಹುಮಾನ ಬಂದಿದೆ. 12-14 ವರ್ಷದ ಬಾಲಕಿಯರ ವಿಭಾಗದಲ್ಲಿ ಅನಿತಾ ನೂರು ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದು ಪದಕ ಪಡೆದಿದ್ದಾರೆ.

ಮಕ್ಕಳು ಉಳುವ ಯೋಗಿಯ ನೋಡಲ್ಲಿ... ಜಾನಪದ ಗೀತೆ ಮತ್ತು ವೀರಗಾಸೆ ಕುಣಿತ ಹಾಗೂ ಭದ್ರಕಾಳಿ ಕುಣಿತ ಪ್ರದರ್ಶಿಸಲು ಮಾರ್ಗದರ್ಶಕರಾಗಿ ಶಾಲೆ ಶಿಕ್ಷಕಿ ಎ.ಬಿ.ಸಂಜುಶ್ರೀ, ಮೋನಿಶಾ ಹಾಗೂ ಕಾರ್ಯದರ್ಶಿ ಸಿದ್ದೇಶ್ ಭಾಗವಹಿಸಿದ್ದರು. ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆ ನಿರ್ದೇಶಕ ಅದಲಗೆರೆ ಎ.ಎಸ್.ಬಸವರಾಜು, ಪಂಕಜನಹಳ್ಳಿ ಶಿವರಾಜ್, ಸಂಸ್ಥಾಪಕ ಚಂದ್ರಮ್ಮ ಚಂದ್ರಶೇಖರಯ್ಯ ಇದ್ದರು.

ವಿಜಯವಾಣಿ ಚಿತ್ರ



ಮುಂಬೈನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಕ್ರೀಡಾಕೂಟದಲ್ಲಿ ಶ್ರೀಸಿದ್ದರಾಮೇಶ್ವರ ಶ್ರವಣ ದೋಷ ಮಕ್ಕಳ ವಸತಿ ಶಾಲೆ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಬಹುಮಾನ ಪಡೆದರು.